

## ಸಾವಿರಕಾಲು ಸರದಾರ

ಇತ್ತೀಚೆಗೆ ತಮಿಳುನಾಡಿನ ರಾಜ್ಯದ ವಲ್ಲಿಮಲ್ಬೆ ಬೆಟ್ಟವನ್ನು ಚಾರಣ ಮಾಡುತ್ತಿದ್ದೆವು. ಒಂದು ಜಾಗದಲ್ಲಿ ಅಸಂಖ್ಯಾತ ಕಂದು ಬಣ್ಣದ ಹುಳುಗಳು ಕಂಡವು. ಅಷ್ಟೊಂದು ಹುಳುಗಳನ್ನು ಒಂದೇ ಜಾಗದಲ್ಲಿ ನೋಡಿ ಆಶ್ಚರ್ಯವಾಯಿತು. ಮಾರನೆಯ ದಿನ ಬೆಂಗಳೂರಿನ ಜ್ಞಾನಭಾರತಿಯಲ್ಲಿ ಗುಂಪಾಗಿರುವ ಸಾವಿರಕಾಲು ಹುಳುಗಳು ಕಂಡವು. ಪ್ರಾಣಿಶಾಸ್ತ್ರ ಓದುವ ನನ್ನ ಸ್ನೇಹಿತರನ್ನು ವಿಚಾರಿಸಿದಾಗ ಅವುಗಳ ಬಗ್ಗೆ ಆಸಕ್ತಿದಾಯಕ ವಿಷಯಗಳು ತಿಳಿದವು. ಸಂಧಿ ಪದಿಗಳ ವಂಶಕ್ಕೆ ಸೇರಿದ ಇವು ಸಸ್ಯಗಳ ದ್ರವ, ಶಿಲೀಂಧ್ರ, ಅಲ್ಲದೆ ಮರಗಳ ಅವಶೇಷಗಳನ್ನು ಆಹಾರಕ್ಕಾಗಿ ಆಶ್ರಯಿಸುತ್ತವೆ. 10,000 ಜಾತಿಗಳನ್ನು ಇವುಗಳಲ್ಲಿ ಗುರುತಿಸಲಾಗಿದೆ. ಪರಿಸರ ಸ್ವಚ್ಛತೆಯಲ್ಲಿ ಸಾವಿರಕಾಲು ಹುಳುಗಳ ಪಾತ್ರ ದೊಡ್ಡದು. ಕೊಳೆಯುತ್ತಿರುವ ಸಸ್ಯಗಳ ಅವಶೇಷಗಳನ್ನು ಸ್ವಚ್ಛ ಮಾಡುವುದು ಇವುಗಳ ಪ್ರಮುಖ ಕೆಲಸ. ಪ್ರಕೃತಿಯ ವೈಶಿಷ್ಟ್ಯ ನೋಡಿಯೇ ಖುಷಿಪಡಬೇಕು.

–ರಾ.ಲ. ಜಗದೀಶ, ಮೈಸೂರು



## ಈ ಸಾವು ನ್ಯಾಯವೆ?

ಚಿತ್ರದಲ್ಲಿ ತೇಲುತ್ತಿರುವ ಬಾತುಕೋಳಿಯ ಶವ (**Indian spot billed duck**) ತುಂಗಭದ್ರಾ ನದಿಯ ಹಿನ್ನೀರಿನ ತಟದಲ್ಲಿರುವ ಭತ್ತದ ಗದ್ದೆಯೊಂದರಲ್ಲಿ ಕಂಡದ್ದು. ಹಿನ್ನೀರಿನಲ್ಲಿ ಮೀನು ಹಿಡಿದು ಹೊಟ್ಟೆ ತುಂಬಿಸಿಕೊಳ್ಳುವ ಈ ರೆಕ್ಕೆಮಿತ್ರರು ಆಗಾಗ ಅಕ್ಕಪಕ್ಕದ ಹೊಲಗದ್ದೆಗಿಳಿದು ಕೃಷಿಗೆ ಅಪಾಯಕಾರಿಯಾದ ಕ್ರಿಮಿಕೀಟಗಳನ್ನು ಹಿಡಿದು ರೈತೋಪಕಾರಿಗಳಾಗುತ್ತವೆ. ಆದರೆ ಇವುಗಳ ಈ ಮೂಕಸಹಾಯಕ್ಕೆ ಕೃಷಿ ರಾಸಾಯನಿಕಗಳು ಯಮಪಾಶವಾಗಿವೆ. ಗದ್ದೆಗಳಿಗೆ ಎರಚಿದ ರಾಸಾಯನಿಕಗಳು ಸಿಂಪಡಿಸಿದ ಕ್ರಿಮಿನಾಶಕಗಳು ನೀರಿನೊಂದಿಗೆ ಬೆರೆತು ವಿಷವಾಗುತ್ತದೆ. ಇದರಿಂದ ಲೆಕ್ಕವಿಲ್ಲದಷ್ಟು ಕ್ರಿಮಿಕೀಟಗಳ ಮಾರಣಹೋಮವೇ ಆಗುತ್ತದೆ. ಹೀಗೆ ಸತ್ತ ಜೀವಿಗಳಲ್ಲಿ ಹಲವು ಜೀವಿಗಳು ಕೃಷಿಗೆ ಸಹಕಾರಿಯಾಗಿವೆ ಎಂಬುದು ಮತ್ತೊಂದು ದುರಂತ. ಇಂತಹ ವಿಷಗದ್ದೆಯ ನೀರುಕುಡಿಯಲು ಇಲ್ಲವೇ ಆಹಾರ ಅರಸಿ ಬರುವ ಬಾನಾಡಿಗಳು ವಿಷಪ್ರಾಶನವಾಗಿ ಜೀವಬಿಡುತ್ತವೆ. ಇಷ್ಟೇ ಅಲ್ಲದೆ ಗದ್ದೆಯಲ್ಲಿ ಮಿಸುಕಾಡದೇ ಬಿದ್ದ ಇವುಗಳನ್ನು ಮುಂಗುಸಿ, ಕಬ್ಬೆಕ್ಕು, ನರಿ, ತೋಳ, ನಾಯಿ ಮುಂತಾದವುಗಳು ತಿಂದು ಸಾಯುತ್ತವೆ. ಇವುಗಳ ಬೇಟೆಯ ಮೂಲ ರಹಸ್ಯ ಅರಿಯದೇ ಸಂತೆಯಲ್ಲಿ ಇವುಗಳನ್ನು ಕೊಂಡು ತಿನ್ನುವವರಿಗೂ ವಿಷದ ಪ್ರಭಾವವಾಗುತ್ತದೆ! ಮನುಷ್ಯನೇ ಸೃಷ್ಟಿಸಿದ ಈ ವಿಷವರ್ತುಲ ಅವನ ಕೊರಳಿಗೇ ಸಾವಿನ ಕುಣಿಕೆಯಾಗುತ್ತಿರುವುದು ಸುಳ್ಳಲ್ಲ.

–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ





## ಅಮೃತೋತ್ಸವದ ಕೊಂಬು…!

ನಮ್ಮ ಅತ್ತೆ ಮಾವರ ಮನೆಯಲ್ಲಿ ನೇತು ಹಾಕಿದ್ದ ಕಾಡು ಕೋಣದ ಕೊಂಬಿಗೀಗ ಅಮೃತೋತ್ಸವ! ಹೊಸನಗರದ ಎಸ್.ಎನ್. ರಸ್ತೆ ನಿವಾಸಿ ಕೆ.ಜಿ ನಾಗೇಶ್ ರಾವ್ ಲಕ್ಷ್ಮೀದೇವಿಯವರ ಮನೆಯಲ್ಲಿ ಇರುವ ಕೊಂಬಿಗೆ 75 ವರ್ಷವಾದರೂ ಮಾಸದೆ ಫಳ ಫಳ ಮಿನುಗುತ್ತಿದೆ! ಹಿಂದೆಲ್ಲಾ ವಯೋಸಹಜವಾಗಿ ಸತ್ತ ಕಾಡೆಮ್ಮೆ, ಕಾಡುಕೋಣದ ಕೊಂಬುಗಳನ್ನು ಒಳಗಿರುವ ಮಾಂಸ ತೆಗೆಯಲು ಒಲೆಯ ಬೂದಿಯೊಂದಿಗೆ ಉಪ್ಪು ಬೆರೆಸಿ ಕೊಂಬಿನಲ್ಲಿ ಹಾಕಿ ಗಾಳಿ ಒಳ ಹೋಗದಂತೆ ಮುಚ್ಚಿ ಸುಮಾರು ಒಂದು ತಿಂಗಳ ನಂತರ ಕೊಂಬನ್ನು ಅಲ್ಲಾಡಿಸಿದಾಗ ಮಾಂಸ ಪುಡಿಯಾದ ಬಗ್ಗೆ ತಿಳಿಯುತ್ತಿದ್ದರಂತೆ! ಹಳ್ಳಿಯವರು ಊರ ಪ್ರಮುಖರ ಮನೆಗೆ ಇವನ್ನು ತಂದು ಕೊಡುತ್ತಿದ್ದರಂತೆ. ಅಲಂಕಾರಿಕ ಹಾಗೂ ಮನೆಗೆ ಬಂದವರ ವಕ್ರದೃಷ್ಟಿ ಬೀಳದಂತೆ ಇದನ್ನು ಮನೆಯಲ್ಲಿ ನೇತು ಹಾಕುತ್ತಾರೆ. ಹೊಳಪು ಬರಲು ಮರಳು ಕಾಗದಕ್ಕೆ (**sand paper**) ಬೂದಿಯನ್ನು ಹಾಕಿ ಕನಿಷ್ಠ ಒಂದು ದಿನವಾದರೂ ಕೊಂಬನ್ನು ಉಜ್ಜುತ್ತಿದ್ದರಂತೆ! ಹೀಗೆ ಉಜ್ಜುವುದರಿಂದ ಕೊಂಬುಗಳು ಹೊಳಪು ಪಡೆದು ಆಕರ್ಷಕವಾಗುವವು. ಪಟ್ಟಣದಿಂದ ಇವರ ಮನೆಗೆ ಭೇಟಿ ನೀಡುವ ನೆಂಟರು, ಮಿತ್ರರು ಕೊಂಬನ್ನು ನೋಡಿ, 'ನಮಗೆ ಕೊಡಿ ಹಣ ಎಷ್ಟಾದರೂ ಪರವಾಗಿಲ್ಲ' ಎಂದು ದುಂಬಾಲು ಬಿದ್ದಿದ್ದೂ ಇದೆ! ಆಗೆಲ್ಲಾ ಅರಣ್ಯ ಇಲಾಖೆ ನಿರ್ಬಂಧವಿದ್ದಿಲ್ಲ. ಮಲೆನಾಡಿನ ಹೆಚ್ಚಿನ ಹಳೆ ಮನೆಗಳಲ್ಲಿ ಹಲ ದಶಕ, ಶತಕ ಕಂಡ ಅಲಂಕಾರಿಕ ಕೊಂಬುಗಳು ಇಂದಿಗೂ ಮಾಸದೆ ಫಳ ಫಳ ಮಿನುಗುತ್ತಾ ಎಲ್ಲರನ್ನೂ ಸ್ವಾಗತಿಸುತ್ತವೆ.

–ನಗರ ಗುರುದೇವ್ ಭಂಡಾರ್ಕರ್,
ಹೊಸನಗರ